5. ಅಧ್ಯಕ್ಷರ ಆಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

26 ವಿಷಯ : ಮೆ॥ ನಂದಿ ಇಂಜಿಯರಿಂಗ್ ಲಿಮಿಟೆಡ್‌ರವರು ಸಿ.ಪಿ. ಯೋಗೇಶ್ವರ್, ಅರಣ್ಯ ಸಚಿವರ ಮೇಲೆ ಎರಡು ಕೋಟಿ ಚೀಟ್ ಮಾಡಿದ್ದಾರೆಂದು ದೂರು ನೀಡಿರುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ :– ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ ವಿಧಾನಸೌಧದ ಪೊಲೀಸ್ ಸ್ಟೇಷನ್‌ನಲ್ಲಿ ಒಬ್ಬ ಮೆ॥ ನಂದಿ ಇಂಜಿನಿಯರಿಂಗ್ ಲಿಮಿಟೆಡ್ ಎನ್ನುವವರು ಒಬ್ಬ ಸಿ.ಪಿ. ಯೋಗೇಶ್ವರ್ ಎನ್ನುವ ಮಂತ್ರಿ ಮೇಲೆ ಇವರು ನನಗೆ ಎರಡು ಕೋಟಿ ರೂಪಾಯಿ cheat ಮಾಡಿದ್ದರೆಂದು ಒಂದು complaint ಅನ್ನು file ಮಾಡಿದ್ದಾರೆ. ಅವರು ಇದಕ್ಕೆ ಒಂದು endorsement ಕೂಡ ಕೊಟ್ಟಿದ್ದಾರೆ. ನಿನ್ನೆ ರಾತ್ರಿ complaint file ಮಾಡಿದ್ದರೂ, ಇಲ್ಲಿಯವರೆಗೂ ಕೂಡ The police officers have not registered FIR. ಮಾನ್ಯ ಎಸ್.ಎಂ. ಕೃಷ್ಣ ಮೇಲೆ ಮಾನ್ಯ ಯಡಿಯೂರಪ್ಪನವರ ಮೇಲೆ, ನನ್ನ ಮೇಲೆ ಇನ್ನೊಬ್ಬರ ಮೇಲೆ complaint ಕೊಟ್ಟ ತಕ್ಷಣ ಹಿಂದೆ ಮುಂದೆ ನೋಡದೆ FIR ಹಾಕಿ ಬಿಡುತ್ತಾರೆ. But in Vidhana Soudha police station already 18 hours have passed, why FIR has not been filed. Why Mr. Ashok is protecting ? Who is protecting this ? First ಒಂದು FIR ಹಾಕಬೇಕು ಸ್ವಾಮಿ. ಆಮೇಲೆ investigation ನಲ್ಲಿ ತಪ್ಪೋ ಸುಳ್ಳೋ ಮತ್ತೊಂದು ನೋಡುವುದು. ಈಗ ನಮ್ಮ ಮೇಲೆ ಹಾಕಿಲ್ಲವೇ! ನಿಜವಾ, ಸುಳ್ಳೋ ಎಂದು ? Chief Minister ರವರ ಮೇಲೆ ಹಾಕಲಿಲ್ಲವೇ ? ಈ ರಾಷ್ಟ್ರದಲ್ಲಿ ಎಲ್ಲಾ ಸಂದರ್ಭದಲ್ಲಿ complaint ಕೊಟ್ಟ ತಕ್ಷಣ ಕಾನೂನಿನಲ್ಲಿ ಏನಿದೆ ಎಂದರೆ FIR ಹಾಕಬೇಕು. ಆಮೇಲೆ ಆಕಸ್ಮಾತ್ ಆ limits ಇಲ್ಲವೆಂದರೆ ಬೇರೆ limits ಗೆ ಕಳುಹಿಸಿ ಕೊಡುವುದಕ್ಕೆ ಕೂಡ ತನ್ನ ಸ್ವಂತ ಖರ್ಚಿನಲ್ಲೇ ಸರ್ಕಾರ ಕಳುಹಿಸಬೇಕು ಎಂದು judgement ಇದೆ. ಕಾನೂನು ಇದೆ. ಅದನ್ನು ಬಿಟ್ಟು ಇಲ್ಲಿ ಏನು ಸ್ವಾಮಿ ನಡೆಯುತ್ತಿದೆ ? ನಾನು ಇದರ ಬಗ್ಗೆ ಪ್ರಸ್ತಾಪ ಮಾಡವುದಕ್ಕೋಸ್ಕರ ತಮಗೆ ಮುಂಚಿತವಾಗಿ ಕಳುಹಿಸಿದ್ದೇವೆ. ನನಗೆ ಇದರ ಬಗ್ಗೆ ಮಾಧ್ಯಮದವರು ತಿಳಿಸಿದರು. ನಾನು ಏನಪ್ಪ ಇದು ಎಂದು ತಕ್ಷಣ ತರಿಸಿಕೊಂಡೆನು. ಒಬ್ಬ ಮಂತ್ರಿ ಮೇಲೆ complaint ಕೊಟ್ಟರೂ ಕೂಡ FIR ಹಾಕಲಿಲ್ಲವೆಂದರೆ ಹೇಗೆ ? ವಿಧಾನ ಸೌಧದ ಮುಂಬಾಗಿಲಿನಲ್ಲಿ ಇವೆಲ್ಲ ವಿಚಾರಗಳು ನಡೆದವು. ಅದು

complaint ನಲ್ಲಿ ಇದೆ. L.H. ನಲ್ಲಿ Negotiation ನಡೆಯಿತು. ಎರಡು ಕೋಟಿ ರೂಪಾಯಿ ದುಡ್ಡು ಕೊಟ್ಟಿದ್ದೇವೆ. ನಮಗೆ ಕೊಟ್ಟಿಲ್ಲ ಎಂದು ಇದೆ. ದಯವಿಟ್ಟು ಇಲ್ಲಿ ಮಂತ್ರಿಗಳು ಇದ್ದಾರೆ. ಅವರು ಏನು ಬೇಕಾದರೂ ಹಾಕಿಕೊಳ್ಳಲಿ. ಪಾಪ ಅದು ತಪ್ಪೋ, ಸುಳ್ಳೋ, ಅವರದು ನ್ಯಾಯನೋ, we will not go to the merits of the case. But once complaint has been filed by someone, filing an FIR is the prime duty of any officer. It has to be done.

ಅಧ್ಯಕ್ಷರು :– ಅಲ್ಲ, ಈಗ ಅದು civil nature ಆದರೆ ?

ಶ್ರೀ ಡಿ.ಕೆ. ಶಿವಕುಮಾರ್ :– Whether it is civil or criminal Cheating ಎಂದು complaint ಕೊಟ್ಟಾಗಿದೆ. ನೀವು ಏನು ಬೇಕಾದರೂ ಮುಚ್ಚಿಕೊಳ್ಳಿ. ನೀವು Civil ಅಂತಾನೇ ಏನು ಬೇಕಾದರೂ ಮಾಡಿ. ನೀವು first FIR ಹಾಕಿ ಸ್ವಾಮಿ. That is the law of the land. Hon'ble Law Minister is here, ಅವರಿಗೆ ಗೊತ್ತಿದೆ. ನಾನೇನು ದೂಷಣೆ ಮಾಡುತ್ತಿಲ್ಲ. ಅವರು complaint ಕೊಟ್ಟಿರುವುದು ತಪ್ಪಿರಬಹುದು. ಈಗ ನನ್ನ ಮೇಲೆ complaint ಹಾಕಿಲ್ಲವೇ ಸ್ವಾಮಿ? ಅವರು ನನಗೆ ಏನಾದರೂ ಮಾಡಿದ್ದಾರಾ ? ಯಡಿಯೂರಪ್ಪ ಅವರನ್ನು ಸೇರಿಸಿಬಿಟ್ಟು ಅವರಿಗೆ phone ಮಾಡಿಲ್ಲ. ಏನು ಮಾಡಿಲ್ಲ request ಮಾಡಿಕೊಂಡಿಲ್ಲ. ಅವರನ್ನು ಸೇರಿಸಿ case ಹಾಕಿಲ್ಲವಾ ? ಲೆಹರ್ ಸಿಂಗ್‌ಗೂ ಇದಕ್ಕೂ ಏನು ಸಂಬಂಧ ? ನನಗೂ ಬಿಜೆಪಿಗೂ tag on ಆಗಬೇಕೆಂದೂ ಇದೇ ಹೆಸರಿನ ಮಂತ್ರಿಗಳು ಸೇರಿಸಿ, ಮಾಧ್ಯಮದವರು ಹೇಳಿದ್ದು, ಆ complaint ಯಾರೂ ಕೊಟ್ಟಿದ್ದಾರೆ. ಅವನು ಹೇಳಿದ ಏಯ್ ಯಡಿಯೂರಪ್ಪನವರನ್ನು ಸೇರಿಸಿ complaint ಹಾಕೋ, file ಮಾಡು, ಕೇಸುಗಳು ಕಡಿಮೆ ಆಗುತ್ತದೆ ಎಂದು ಹೇಳಿದ. ಇದೆಲ್ಲ ನಡೆದದ್ದು ಸತ್ಯ, ಸುಳ್ಳಲ್ಲ, ದಯವಿಟ್ಟು I request the Hon'ble minister please instruct. You are the leader of the House sitting here. First FIR ಹಾಕಿ ಸ್ವಾಮಿ complaint ಕೊಟ್ಟ ತಕ್ಷಣ FIR ಹಾಕಬೇಕು. ಅದು ನಿಜನೋ, ಸುಳ್ಳೋ ಅದು ಬೇರೆ ವಿಚಾರ. Central Minister Sri ಎಸ್.ಎಂ. ಕೃಷ್ಣ ಅವರ ಮೇಲೆ FIR ಹಾಕಿ investigation ಶುರು ಮಾಡಿದರು ಸ್ವಾಮಿ. Cabinet ನಲ್ಲಿ ನಡೆದಂತಹ ವಿಚಾರ, ಅದು ಕಾನೂನಿನಲ್ಲಿ ಅವಕಾಶವಿದೆ. ನಾನು ತಪ್ಪು ಎಂದು ಹೇಳಿಲ್ಲ. That is the law of the land. ನೀವು ಕೇಸ್ ತೆಗೋತೀರಿ, ಆದರೆ ಮಿಕ್ಕಿದ್ದು

ಬೇರೆ ವಿಚಾರ. FIR ಹಾಕದೇ ನಿಮ್ಮ Station ರವರು ಏಕೆ ಸುಮ್ಮನೆ ಕುಳಿತಿದ್ದಾರೆ? ನೀವು ಏನಾದರೂ ಅವರಿಗೆ ರಕ್ಷಣೆ ಮಾಡುತ್ತಿದ್ದೀರಾ ? Law Minister ರಕ್ಷಣೆ ಮಾಡುತ್ತಿದ್ದಾರಾ? Home Minister ದಯವಿಟ್ಟು ತಿಳಿಸಬೇಕು. ಏಕೆಂದರೆ ಇಲ್ಲಿ ನ್ಯಾಯವನ್ನು ಒದಗಿಸಿಕೊಡಬೇಕು. Injustice should not be blown from the seat of Justice. ತಾವು Direction ಕೊಡಬೇಕು. ಇಲ್ಲ FIR ಹಾಕಿ ಮಿಕ್ಕಿದ್ದು ಕಾನೂನು ಪ್ರಕಾರ ಆಗಲಿ. ನಾಳೆ ಬೆಳಿಗ್ಗೆ Investigation ಮಾಡಿ ಬಿ ರಿಪೋರ್ಟ್ ಬರೆಯಿರಿ. ನಾನು ಬೇಡವೆಂದು ಹೇಳುವುದಿಲ್ಲ. ಸುಳ್ಳಾಗಿರಬಹುದು. ಸುಳ್ಳು complaint ಕೊಟ್ಟಿರುವವರ ಮೇಲೆ ಕೇಸ್ ಹಾಕಲಿ. ಮಾನನಷ್ಟ ಮೊಕದ್ದಮೆ ಹಾಕಲಿ. ಈಗ ನಾವೆಲ್ಲ ಅನುಭವಿಸುತ್ತಿದ್ದೇವಲ್ಲ? ದಯವಿಟ್ಟು ಮಾನ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. Whatever the complaint is, you know the Law, you are the Law Minister. FIR ಹಾಕುವಂಥಾದ್ದು ಒಂದು basic duty ಬರೀ endorsement ಕೊಟ್ಟುಬಿಟ್ಟು ನಾಳೆ ನಾನು ಅವರನ್ನು ಕೇಳಬೇಕು, ಇವರನ್ನು ಕೇಳಬೇಕೆಂದು ತಳ್ಳುತ್ತಿದ್ದಾರೆ. This is wrong.

ಶ್ರೀ ಎಸ್. ಸುರೇಶ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಕೆ. ಶಿವಕುಮಾರ್‌ರವರು ಈ ವಿಚಾರವನ್ನು ಈಗ ನನ್ನ ಗಮನಕ್ಕೆ ತರುತ್ತಿದ್ದಾರೆ. ನಿನ್ನ 27ನೇ ತಾರೀಖು ಮೆ॥ ನಂದಿ ಇಂಜನಿಯರಿಂಗ್ ಲಿಮಿಟೆಡ್ ಇವರು. ಸ್ಟೇಷನ್ ಹೌಸ್ ಆಫೀಸರ್, ವಿಧಾನಸೌಧ ಪೊಲೀಸ್ ಸ್ಟೇಷನ್‌ಗೆ complaint ಕೊಟ್ಟಿದ್ದರೂ ಇದುವರೆಗೂ FIR Lodge ಮಾಡಿಲ್ಲವೆನ್ನುವ ವಿಚಾರವನ್ನು ಗಮನಕ್ಕೆ ತರುತ್ತಿದ್ದಾರೆ. ನಾನೂ ಕೂಡಲೆ ಈ ವಿಚಾರದಲ್ಲಿ ಏನು complaint ಕೊಟ್ಟಿದ್ದಾರೆ. ಅದರ ವಿಚಾರ ಕುರಿತು ಅಗತ್ಯ ಕ್ರಮ ಜರುಗಿಸುವುದಕ್ಕೆ FIR ಮಾಡಬೇಕು. ಮಿಕ್ಕ ಕ್ರಮ ಜರುಗಿಸುವುದಕ್ಕೆ ನಾನು ಆದೇಶ ಕೊಡುತ್ತೇನೆ.

ಅಧ್ಯಕ್ಷರು :– ಈಗ ಒಂದು ಪ್ರಕಟಣೆ ಇದೆ.

"ಕಾರ್ಯಕಲಾಪ ಪಟ್ಟಿಯಂತೆ 2012–13ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯನ್ನು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭಿಸಿದ್ದು. ವಿವಿಧ ಪಕ್ಷದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ ನಂತರ ಮಾನ್ಯ ಮುಖ್ಯಮಂತ್ರಿಗಳು ನಾಳೆ ಎಂದರೆ ದಿನಾಂಕ : 29–3–2012 ರಂದು ಮಧ್ಯಾಹ್ನ 1–00 ಗಂಟೆಗೆ ಉತ್ತರವನ್ನು ನೀಡಲಿರುವರು.